ದಿನಾಂಕ : 20-07-2017 ಓ ಎಸ್ ನಂ. 240/2013

ಡಿ. ಡಬ್ಲ್ಯೂ - 1

<u>ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಂದುವರೆದ ಮುಖ್ಯ ವಿಚಾರಣೆ : ಶ್ರೀ. ಸಿ.ಹೆಚ್.ಹೆಚ್ ವಕೀಲರಿಂದ</u>

ತಲಾಟಿಯವರು ಕೊಟ್ಟ ನೊಟೀಸಿನ ಮೂಲ ಪ್ರತಿ ಹಾಜರುಪಡಿಸಿದ್ದೇನೆ, ಅದನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ದಾಖಲೆಯನ್ನು ನಿಡಿ-12(ಎ) ಎಂದು ಗುರುತಿಸಲಾಯಿತು. ಸದರಿ ನಿಡಿ-12 ಗೆ ನಾನು ಮತ್ತು ನನ್ನ ಸಹೋದರರು ಹೆಬ್ಬಟ್ಟಿನ ಗುರುತನ್ನು ಹಾಕಿದ ನಂತರ ತಲಾಟಿ ಅದಕ್ಕೆ ಸಹಿ ಮಾಡಿದ್ದಾರೆ. ಮೊದಲು ನನ್ನ ಸಹೋದರ ರುದ್ರಪ್ಪ ನಂತರ ವಾದಿ ಉಳವಪ್ಪ, 3ನೇಯದಾಗಿ ನಾನು ಹೆಬ್ಬಟ್ಟಿನ ಗುರುತನ್ನು ಕೊಟ್ಟಿದ್ದೇನೆ. ವಾಟ್ನಿ ಪ್ರಕಾರ ದಾವಾ



ಸ್ವತ್ತುಗಳ ಕುರಿತು ನಮ್ಮ ಹೆಸರನ್ನು ಹಚ್ಚಲು ನಾವು 3 ಜನ ಸಹೋದರರು ಕೊಟ್ಟ ಜಂಟಿ ಅರ್ಜಿಯನ್ನು ಹಾಜರುಪಡಿಸಿದ್ದೆನೆ. ಅದನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಗುರುತಿಸಿದ ದಾಖಲೆಯನ್ನು ನಿಡಿ-13(ಎ) ಎಂದು ಗುರುತಿಸಲಾಯಿತು. ನಿಡಿ-13(ಎ) ಗೆ ನಾವು 3 ಜನ ಸಹಿ ಮಾಡಿದ್ದೇವೆ. ಯರಡಾಲ ಗ್ರಾಮಲೆಕ್ಕಾಧಿಕಾರಿ ವಾಟ್ನಿ ಪ್ರಕಾರ ಖಾತೆ ಮಾಡಲು ಕೊಟ್ಟ ನೋಟೀಸನ್ನು ಹಾಜರುಪಡಿಸಿದ್ದೇನೆ, ಅದನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಗುರುತಿಸಿದ ದಾಖಲೆಯನ್ನು ನಿಡಿ-29 ಎಂದು ಗುರುತಿಸಲಾಯಿತು. ಸದರಿ ದಾಖಲೆಗೆ ನಾವು 3 ಜನ ಸಹೋದರರು ಸಹಿಯಾಗಿ ಹೆಬ್ಬಟ್ಟಿನ ಗುರುತನ್ನು ಹಾಕಿದ್ದೇವೆ. ಅದೇ ರೀತಿ ನಾವು 3 ಜನ ಸಹೋದರರು ಕೊಟ್ಟ ವರದಿಯನ್ನು ಹಾಜರುಪಡಿಸಿದ್ದೇನೆ, ಅದನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಗುರುತಿಸಿದ ದಾಖಲೆಯನ್ನು ನಿಡಿ-30 ಎಂದು ಗುರುತಿಸಲಾಯಿತು. ಸದರಿ ದಾಖಲೆಗೆ ನಾವು 3 ಜನ ಸಹೋದರರು ಸಹಿಯಾಗಿ ಹೆಬ್ಬಟ್ಟಿನ ಗುರುತನ್ನು ಹಾಕಿದ್ದೇವೆ. ನಮ್ಮ ಕುಟುಂಬಕ್ಕೆ ಸೇರಿದ ಸರ್ವೆ ನಂ. 94/13 ರ 1942-43 ರಿಂದ 1952-53 ವರೆಗಿನ ಉತಾರನ್ನು ಹಾಜರುಪಡಿಸಿದ್ದೇನೆ ಅದನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಗುರುತಿಸಿದ ದಾಖಲೆಯನ್ನು ನಿಡಿ-31 ಎಂದು ಗುರುತಿಸಲಾಯಿತು. ಸರ್ವೆ ನಂ. 94/9 ರ 1932-33 ರಿಂದ

1951-52 ವರೆಗಿನ ಉತಾರನ್ನು ಹಾಜರುಪಡಿಸಿದ್ದೇನೆ ಅದನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಗುರುತಿಸಿದ ದಾಖಲೆಯನ್ನು ನಿಡಿ-32 ಎಂದು ಗುರುತಿಸಲಾಯಿತು. ಸರ್ವೆ ನಂ. 94/2 ರ 1942-43 ರಿಂದ 1951-52 ವರೆಗಿನ ಉತಾರನ್ನು ಹಾಜರುಪಡಿಸಿದ್ದೇನೆ ಅದನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಗುರುತಿಸಿದ ದಾಖಲೆಯನ್ನು ನಿಡಿ-33 ಎಂದು ಗುರುತಿಸಲಾಯಿತು. ಸರ್ವೆ ನಂ. 94/8+9 ರ 1952-53 ರಿಂದ 1962-63 ವರೆಗಿನ ಉತಾರನ್ನು ಹಾಜರುಪಡಿಸಿದ್ದೇನೆ ಅದನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಗುರುತಿಸಿದ ದಾಖಲೆಯನ್ನು ನಿಡಿ-34 ಎಂದು ಗುರುತಿಸಲಾಯಿತು. ಸರ್ವೆ ನಂ. 15/3ಕ+2ಬ/2 ಇದರ ಪಹಣಿ ಉತಾರ ಹಾಜರುಪಡಿಸಿದ್ದೇನೆ ಅದನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಗುರುತಿಸಿದ ದಾಖಲೆಯನ್ನು ನಿಡಿ-35 ಎಂದು ಗುರುತಿಸಲಾಯಿತು. ಸರ್ವೆ ನಂ. 15/3ಅ ಇದರ ಪಹಣಿ ಉತಾರ ಹಾಜರುಪಡಿಸಿದ್ದೇನೆ ಅದನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಗುರುತಿಸಿದ ದಾಖಲೆಯನ್ನು ನಿಡಿ-36 ಎಂದು



ಗುರುತಿಸಲಾಯಿತು. ಸರ್ವೆ ನಂ. 95/3 ಇದರ ಪಹಣಿ ಉತಾರ ಹಾಜರುಪಡಿಸಿದ್ದೇನೆ ಅದನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಗುರುತಿಸಿದ ದಾಖಲೆಯನ್ನು ನಿಡಿ-37 ಎಂದು ಗುರುತಿಸಲಾಯಿತು.

ಪಾಟೀ ಸವಾಲು : ಶ್ರೀ. ಆರ್.ಎಸ್.ಕೆ. ವಕೀಲರು

ವಾದಿ ಪರ ಶ್ರೀ. ಆರ್.ಎಸ್.ಕೆ ವಕೀಲರು ಗೈರು ಹಾಜರಿದ್ದು ಅವರ ಪರ ಶ್ರೀ. ಕೆ.ಜಿ.ಹೆಚ್. ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು ಸಕಾರಣಗಳನ್ನು ಪರಿಗಣಿಸಿ ಪಾಟೀ ಸವಾಲನ್ನು ಮುಂದೂಡಲಾಯಿತು. _

(ತೆರೆದ ನ್ಯಾಯಾಲಯದದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಹೆ ಪ್ರ ದ ನ್ಯಾ ದಂ ನ್ಯಾ ಬೈಲಹೊಂಗಲ